ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂಗಳ ನ್ಯಾಯಾಲಯ,
ಗಂಗಾವತಿ.

**24** ನೇ ಜುಲೈ **2025**

**ಸಿ.ಸಿ.ನಂ.2762/2023**

ಪಿರ್ಯಾದಿಃ 1) ಕರ್ನಾಟಕ ಸರ್ಕಾರ
ಕನಕಗಿರಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ 1) ಸಂತೋಷ ತಂದೆ ಶಾಂತಪ್ಪ ಪರಸ್ತಿ,
ವಯಸ್ಸುಃ 38 ವರ್ಷ, ಉಃ ಚಾಲಕ,
ಸಾಃ ಕಲಬುರಗಿ ಘಟಕ-2, ಆಲೂರ ಬಿ,
ತಾಃ ಅಳಂದ, ಜಿಃ ಕಲಬುರಗಿ.

ಆಪಾದನೆ

ನಾನು ಮೇಘಾ ಸೋಮಣ್ಣವರ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಗಂಗಾವತಿ, ಆದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೆಃ

1) ದಿನಾಂಕಃ 07-05-2023 ರಂದು ರಾತ್ರಿ 11-00 ಗಂಟೆಯ ಸುಮಾರಿಗೆ ಕನಕಗಿರಿ ಪೋಲಿಸ ಠಾಣೆ ಹದ್ದಿ ಪೈಕಿ, ಕನಕಗಿರಿ ಪಟ್ಟಣದ ಅಂಬೇಡ್ಕರ್ ಸರ್ಕಲ್ ಹತ್ತಿರ ಆರೋಪಿ ಬಸ್ ಚಾಲಕ ಬಿಲ್ಲೆ ನಂ.6797 ನೀನು ಚಲಾಯಿಸುತ್ತಿದ್ದ ಕೆ.ಎಸ್.ಆರ್.ಟಿ.ಸಿ ಬಸ್ ನಂ.ಕೆಎ-32/ಎಫ್-2954 ನೇದ್ದನ್ನು ಒಮ್ಮಿಂದೊಮ್ಮೆಲೆ ಜೋರಾಗಿ ಮತ್ತು ನಿರ್ಲಕ್ಷತನದಿಂದ ಚಲಾಯಿಸಿದ್ದರಿಂದ ಚಾಸಾ-6 ಬಸ್ ನಿಂದ ಇಳಿಯುತ್ತಿರುವಾಗ ರಸ್ತೆಯ ಮೇಲೆ ಬಿದ್ದಿದ್ದರಿಂದ ಸದರಿಯವರಿಗೆ ಮುಖಕ್ಕೆ, ಬಲಗಣ್ಣಿನ ಹತ್ತಿರ, ಕೈಗಳಿಗೆ ಹಾಗೂ ಎದೆಗೆ ಭಾರಿ ಗಾಯವಾಗಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ 279, 338 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾದವನ್ನು ಎಸಗಿರುವಿರಿ.

ಸದರಿ ಮೇಲ್ಕಂಡ ಅಪರಾಧಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ ಮತ್ತು ಸದರಿ ಆಪಾದನೆಗಳಿಗೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗುವುದು.

<u>ಆರೋಪಿತನ ಹೇಳಿಕೆ</u>

ಪ್ರಶ್ನೆ 1) ಮೇಲ್ಕಂಡ ಆಪಾದನೆಯನ್ನು  ಅರ್ಥಮಾಡಿಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ-2) ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ  ವಿಚಾರಣೆಯಾಗಬೇಕೆ?

ಉತ್ತರಃ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ/ತರಿಗೆ ಕನ್ನಡ, ಮರಾಠಿ/ ಹಿಂದಿ ಬಾಷೆಯಲ್ಲಿ ಓದಿ ಹೇಳಿ ನಂತರ ಆರೋಪಿ/ಗಳು ನೀಡಿದ ಉತ್ತರವನ್ನು ಯತಾವತ್ತಾಗಿ ಬರೆದುಕೊಂಡು ಸರಿಯಾಗಿದೆ ಎಂದು ದೃಢಿಕರಿಸಿದೆ.)

ಆರೋಪಿತನ ಸಹಿಃ

ಸ್ಥಳಃ ಗಂಗಾವತಿ
ದಿನಾಂಕಃ**24.07.2025**

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಗಂಗಾವತಿ.